ದಿನಾಂಕ 06-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಸಂ. 4 ರ ಮೇಲೆ ಪಾಟೀ ಸವಾಲುಃ2 ಮತ್ತು 3 ನೇ ಎದುರುದಾರರ ಪರವಾಗಿ ಶ್ರೀ ಎಸ್.ಬಿ.ಕೆ ವಕೀಲರಿಂದಃ**

1. ಅಸಲು ದಾವಾ ಸಂಃ 262/2014 ರ ದಾವೆಯು ವಜಾ ಆದ ಬಗ್ಗೆ ನನಗೆ ಡಿಸೆಂಬರ್ ತಿಂಗಳ 2022 ರಲ್ಲಿ ಮೊದಲ ಬಾರಿಗೆ ಗೊತ್ತಾಗಿರುತ್ತದೆ. ಸದರಿ ಸಂಗತಿಯು ನಾನು ವಕೀಲರನ್ನು ಹಾವೇರಿಯಲ್ಲಿ ಭೇಟಿ ಆದಾಗ ಗೊತ್ತಾಗಿರುತ್ತದೆ. ಯಾವ ದಿನದಿಂದ ಯಾವ ದಿನದವರೆಗೆ ಗೋವಾಗೆ ಕೆಲಸ ಮಾಡಲು ಹೋಗಿದ್ದೆ ಎಂದು ನೆನಪಿಲ್ಲ. ಗೋವಾಗೆ ಕೆಲಸವನ್ನು ಮಾಡಲು ನಾನು ಮತ್ತು ಎಲ್ಲಾ ಕುಟುಂಬದ ಸದಸ್ಯರು ಹೋಗಿದ್ದೆವು. ಗೋವಾದಲ್ಲಿ ನಾವು ಕೆಲಸ ಮಾಡುತ್ತಿದ್ದ ಸ್ಥಳದ ಹೆಸರು ಗೊತ್ತಿಲ್ಲ. ಪ್ರತಿನಿತ್ಯ ರೂ.250/- ಸಂಬಳವನ್ನು ನೀಡುತ್ತಿದ್ದರು. ಅಲ್ಲಿ ಗಂಡು ಮಕ್ಕಳಿಗೆ ರೂ.400/- ಸಂಬಳವನ್ನು ನೀಡುತ್ತಿದ್ದರು.

2. ಸುಮಾರು 5 ತಿಂಗಳವರೆಗೆ ಕಬ್ಬಿನ ಕಟಾವು ಮಾಡಲು ಹೋಗಿದ್ದೆವು ಎಂದು ಮುಖ್ಯ ಅರ್ಜಿಯಲ್ಲಿ ಬರೆಸಿರುತ್ತೇನೆ. ಕಬ್ಬು ಕಟಾವು ಮಾಡಲು ಹೋಗಿದ್ದ ರೈತರ ಹೆಸರುಗಳು ಗೊತ್ತಿಲ್ಲ. ನನ್ನ ಅನಾರೋಗ್ಯದ ನಿಮಿತ್ತ ವಕೀಲರನ್ನು ಭೇಟಿ ಆಗಲು ಆಗಿರಲಿಲ್ಲ ಎಂಬ ವಿಷಯವನ್ನು ಮೂಲ ಅರ್ಜಿಯಲ್ಲಿ ಬರೆಸಿರುತ್ತೇನೆ. 1 ನೇ ಅರ್ಜಿದಾರರಿಗೆ ಆರೋಗ್ಯವು ಅಲ್ಪಸ್ವಲ್ಪ ಚೆನ್ನಾಗಿರುವುದಿಲ್ಲ. ಸುಮಾರು 2-3 ಸಲ ನನಗೆ ಆರೋಗ್ಯ ಚೆನ್ನಾಗಿ ಇಲ್ಲದಿದ್ದಾಗ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಚಿಕಿತ್ಸೆಯನ್ನು ಅಕ್ಕಿಆಲೂರಿನ ಉಡುಪಿ ಡಾಕ್ಟರ್ ಬಳಿ ತೋರಿಸಿರುತ್ತೇನೆ. ಚಿಕಿತ್ಸೆಯನ್ನು ಪಡೆದ ಬಗ್ಗೆ ವೈದ್ಯರು ದಾಖಲೆ ನೀಡಿದ್ದರು. ಸದರಿ ವೈದ್ಯಕೀಯ ದಾಖಲೆಗಳು ಈಗ ಲಭ್ಯ ಇರದೇ ಇರುವ ಕಾರಣಕ್ಕೆ ಹಾಜರುಪಡಿಸಿರುವುದಿಲ್ಲ.

3. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಮತ್ತು ಅನಕ್ಷರಸ್ತೆ ಎಂದು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಮತ್ತು ನನ್ನ ಕುಟುಂಬದವರು ಗೋವಾಗೆ ದುಡಿಯಲು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿಂದ ಬಂದ ನಂತರ ಪುನಃ ಹಾವೇರಿ ಜಿಲ್ಲೆಯ ಹಾವನೂರಿಗೆ ಸುಮಾರು 5 ತಿಂಗಳ ಕಾಲ ಕಬ್ಬಿನ ಕಟಾವು ಮಾಡಲು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಃ 262/2014 ರ ದಾವೆಯು ವಜಾ ಆದ ಸಂಗತಿಯು ನನಗೆ ವಜಾ ಆದ 2 ದಿನಗಳ ಒಳಗೆ ತಿಳಿದಿದ್ದರೂ 2022 ರ ಡಿಸೆಂಬರ್ ಮಾಹೆಯಲ್ಲಿ ಮೊದಲ ಬಾರಿಗೆ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕಾಲ ವಿಳಂಬ ಮನ್ನಾ ಅರ್ಜಿಯು ಸುಳ್ಳು ಸಂಗತಿಗಳ ಆಧಾರದ ಮೇಲೆ ಇದ್ದು, ಅದು ವಜಾ ಆಗಲು ಅರ್ಹ ಎಂದರೆ ಸರಿಯಲ್ಲ. ಸದರಿ ದಾವೆಯು ಯಾವ ದಿನಾಂಕದಂದು ವಜಾ ಆಗಿರುತ್ತದೆ ಎಂದು ನೆನಪಿಲ್ಲ.

**ಮರು ವಿಚಾರಣೆಃಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ